सत्यमेव जयते

ರಾಜೀವ್ ಚಂದ್ರಶೇಖರ್
ಸಂಸತ್ ಸದಸ್ಯರು

ಜನವರಿ 23, 2019

*ಮಾನ್ಯ ಕುಮಾರಸ್ವಾಮಿ ಅವರೇ,*

ವಿಷಯ: ಮುಖ್ಯಮಂತ್ರಿಗಳ ಅಧಿಕೃತ ನಿವಾಸದ ಹತ್ತಿರ ಸ್ಯಾಂಕಿ ರಸ್ತೆಯ ಬಳಿ ನಿರ್ಮಿಸಲಾಗುತ್ತಿರುವ ಕಟ್ಟಡವು ಯೋಜನಾ ಮಂಜೂರಾತಿಗೆ ವಿರುದ್ಧವಾಗಿದ್ದು, ಇದರ ಉಲ್ಲಂಘನೆಯನ್ನು ಕೊನೆಗೊಳಿಸಿ

ನಿತೇಶ್ ಎಸ್ಟೇಟ್ ಲಿಮಿಟೆಡ್ ಅವರ ನಿತೇಶ್ ಪಾರ್ಕ್ ಅವೆನ್ಯೂ (ಪ್ರಾಪರ್ಟಿ ನಂ 25/3, ಅಬ್ಬಾಟ್ ಲೇಔಟ್, ಸ್ಯಾಂಕಿ ರಸ್ತೆ) ಕಟ್ಟಡವು “ಕಟ್ಟಡ ಯೋಜನಾ ಮಂಜೂರಾತಿ ಮತ್ತು ಬಿಲ್ಡಿಂಗ್ ಬೈಲಾಗಳ” ಸ್ಪಷ್ಟ ಉಲ್ಲಂಘನೆಯಾಗಿರುವುದಾಗಿ ಯುನೈಟೆಡ್ ಬೆಂಗಳೂರು-ನಾಕರೀಕ ವೀಕ್ಷಣಾ ಸಮಿತಿ ಬರೆದಿರುವ ಪತ್ರವನ್ನು ಲಗತ್ತಿಸಲಾಗಿದೆ.

ಈ ಆಪಾದಿತ ಉಲ್ಲಂಘನೆಯನ್ನು ತಡೆಯಲು ಮಧ್ಯ ಪ್ರವೇಶಿಸಿ ತನಿಖೆ ಮಾಡಬೇಕೆಂದು ಮತ್ತು ಕಟ್ಟಡ ನಿಯಮಗಳು ಹಾಗೂ ಝೋನಿಂಗ್ ನಿಯಮಗಳನ್ನು ಜಾರಿಗೊಳಿಸಲು ನಿರ್ಲಕ್ಷ್ಯ ತೋರಿದ ಅಧಿಕಾರಿಗಳ ವಿರುದ್ಧ ಕಾನೂನಿನ ಪ್ರಕಾರ ಶಿಸ್ತು ಕ್ರಮ ತೆಗೆದುಕೊಳ್ಳಬೇಕೆಂದು ಈ ಮೂಲಕ ನಾನು ನಿಮ್ಮನ್ನು ಒತ್ತಾಯಿಸುತ್ತಿದ್ದೇನೆ.
ಈ ರೀತಿಯ ಉಲ್ಲಂಘನೆಗಳು ಬೆಂಗಳೂರಿನಾದ್ಯಂತ ನಡೆಯುತ್ತಿದ್ದು, ಕೆಲ ಭ್ರಷ್ಟ ರಾಜಕಾರಣಿಗಳು, ಅಧಿಕಾರಿಗಳು ಮತ್ತು ಬಿಲ್ಡರ್ ಗಳು ಸೇರಿ ಬೆಂಗಳೂರನ್ನು ದರೋಡೆ ಮಾಡಿ ನಾಶಪಡಿಸುತ್ತಿರುವುದನ್ನು ಕಂಡು ನಾಗರೀಕ ಸಮಾಜ ದಿಗ್ಭ್ರಾಂತಿಯಾಗಿದೆ.

ನಾಡಪ್ರಭು ಕೆಂಪೇಗೌಡರಿಂದ ಸ್ಥಾಪಿಸಲ್ಪಟ್ಟ ಹೆಮ್ಮೆಯ ಬೆಂಗಳೂರು ನಗರದ ಭವಿಷ್ಯವನ್ನು ನಮ್ಮ ಕಣ್ಣ ಮುಂದೆಯೇ ನಿರ್ನಾಮ ಮಾಡಲಾಗುತ್ತಿದೆ.

ಈ ಉಲ್ಲಂಘನೆಯನ್ನು ತಡೆಯುವಲ್ಲಿ ನಿಮ್ಮ ಶೀಘ್ರ ಸಕಾರಾತ್ಮಕ ಪ್ರತಿಕ್ರಿಯೆ ಮತ್ತು ಸೂಕ್ತ ಕ್ರಮವನ್ನು ನಿರೀಕ್ಷಿಸುತ್ತೇನೆ.

ರಾಜೀವ್ ಚಂದ್ರಶೇಖರ್

ಶ್ರೀ ಹೆಚ್.ಡಿ.ಕುಮಾರಸ್ವಾಮಿ
ಸನ್ಮಾನ್ಯ ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ
ವಿಧಾನ ಸೌಧ, ಬೆಂಗಳೂರು

ಪ್ರತಿಯನ್ನು:
ಡಾ. ಜಿ.ಪರಮೇಶ್ವರ, ಸನ್ಮಾನ್ಯ ಉಪ ಮುಖ್ಯಮಂತ್ರಿಗಳು ಮತ್ತು ಬೆಂಗಳೂರು ಅಭಿವೃದ್ಧಿ ಸಚಿವರು, ವಿಧಾನಸೌಧ, ಬೆಂಗಳೂರು.

11ನೇ ಮಹಡಿ, ದೊಡ್ಡ ಗೋಪುರ, ಸರ್ ಎಂ. ವಿಶ್ವೇಶ್ವರಯ್ಯ ಕೇಂದ್ರ, ಡಾ॥ ಅಂಬೇಡ್ಕರ್ ವೀಧಿ, ಬೆಂಗಳೂರು - 560 001
ದೂರವಾಣಿ : 91-80-22863600, ದೂರವಾಣಿ / ಫ್ಯಾಕ್ಸ್ : 91-80-22863680
ಅಂತರ್ಜಾಲ ವಿಳಾಸ : rajeev.c@nic.in
www.rajeev.in / ham:VU2RCL